

# ಪಿಪ್ಪಲಾದನ ವರ

ಕಥೆ: ಮಧು

ಚಿತ್ರ : ಚಿತ್ರಲೇಖ




ಶಿವ ಹಿಂಜರಿದ.
ಮಗು, ನೀನು ಬೇರೆಯವರನ್ನು ಕೊಲ್ಲುವುದಕ್ಕೋಸ್ಕರ ಇಂತಹ ಉಗ್ರ ತಪಸ್ಸನ್ನು ಮಾಡಿದೆಯಾ? ನಿನ್ನನ್ನು ಕಂಡರೆ ನನಗೆ ಮರುಕ ಉಂಟಾಗುತ್ತಿದೆ. ನಾನೇನಾದರೂ ಮೂರನೆಯ ಕಣ್ಣನ್ನು ತೆರೆದರೆ ದೇವತೆಗಳು ಮಾತ್ರವಲ್ಲ, ಇಡೀ ಜಗತ್ತೇ ಭಸ್ಮವಾಗುತ್ತದೆ.
5
ನನಗೆ ಅದರ ಚಿಂತೆಯಿಲ್ಲ. ನಾನು ಕೇಳಿದ ವರವನ್ನು ದಯಪಾಲಿಸು.
6
ಮಗು, ಕೋಪದಲ್ಲಿರುವಾಗ ಜನ ವಿವೇಚನಾ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಪರಿಣಾಮದ ಬಗ್ಗೆ ಯೋಚಿಸುವುದಿಲ್ಲ. ನಿನಗೆ ನನ್ನ ಮೂರನೆಯ ಕಣ್ಣಿನ ಶಕ್ತಿಯ ಬಗ್ಗೆ ತಿಳಿಯದು. ನಾನು ಅದನ್ನು ಸ್ವಲ್ಪ ತೆರೆಯುವೆನು. ಅದರ ಪರಿಣಾಮವನ್ನು ನೋಡು.
7
ಶಿವನು ತನ್ನ ಮೂರನೆಯ ಕಣ್ಣನ್ನು ಸ್ವಲ್ಪ ಮಾತ್ರ ತೆರೆದ. ತನ್ನನ್ನು ಜೀವ ಸಹಿತ ಸುಟ್ಟಂತಾಗಿ ಪಿಪ್ಪಲಾದ ಭಯದಿಂದ ಕಿರುಚಿದ.
8
ಅಯ್ಯೋ! ಉರಿ ತಡೆಯಲಾರೆ. ಎಂತಹ ಶಿಕ್ಷೆ! ಇಂದ್ರನಿಗೆ ಬದಲಾಗಿ ನನ್ನನ್ನೇ ಸುಡುತ್ತಿದ್ದೀಯೆ.


ಶಿವ ಶಾಂತನಾಗಿ, ಎಲ್ಲವನ್ನೂ ವಿವರಿಸಿದ.
ಮಗು, ನಾನು ನಿನ್ನನ್ನು ಸುಡಲಿಲ್ಲ. ನಿನ್ನ ಇಚ್ಛೆಯಂತೆ ದೇವತೆಗಳನ್ನು ಸುಟ್ಟೆ.
9
ನೀನು ನನ್ನನ್ನು ಸುಡುತ್ತಿದ್ದೀಯೆ. ಇದು ನಿನಗೆ ಉಚಿತವಲ್ಲ.
ಶಿವನು ತಳಮಳಗೊಳ್ಳಲಿಲ್ಲ.
10
ನಿನ್ನ ಆಸೆಯಂತೆ ನಾನು ದೇವತೆಗಳನ್ನು ಸುಡಲು ಆರಂಭಿಸಿದೆ. ಆದರೆ ದೇವತೆಗಳ ವಾಸಸ್ಥಾನ ಯಾವುದು? ಮನುಷ್ಯನ ಶರೀರವೇ. ಕೈಯಲ್ಲಿ ಇಂದ್ರ, ಕಣ್ಣಿನಲ್ಲಿ ಸೂರ್ಯ, ಮೂಗಿನಲ್ಲಿ ಅಶ್ವಿನೀಕುಮಾರರು ಹಾಗೂ ಮನಸ್ಸಿನಲ್ಲಿ ಚಂದ್ರ ಇವರು ವಾಸಿಸುತ್ತಾರೆ. ಆದ್ದರಿಂದ ಅವರಿರುವ ಜಾಗದಲ್ಲಿ ಅವರನ್ನು ಸುಡಲು ಆರಂಭಿಸಿದೆ.
ಶಿವನು ತನ್ನ ಮೂರನೆ ಕಣ್ಣನ್ನು ಮುಚ್ಚಿದನು. ಪಿಪ್ಪಲಾದನ ಉರಿ ನಿಧಾನವಾಗಿ ಕಡಿಮೆಯಾಯಿತು.
11
ಪಿಪ್ಪಲಾದ, ಯಾವಾಗಲೂ ಇನ್ನೊಬ್ಬರಿಗೆ ಕೆಡುಕನ್ನು ಬಯಸಬಾರದು. ಅದು ನಮಗೇ ಕೆಡುಕನ್ನು ತರುತ್ತದೆ.
ಪಿಪ್ಪಲಾದ ಪಶ್ಚಾತ್ತಾಪ ಪಟ್ಟ.
ದೇವ, ನನ್ನನ್ನು ಕ್ಷಮಿಸು. ನಿನ್ನ ಪಾದಪದ್ಮಗಳಲ್ಲಿ ಶುದ್ಧ ಭಕ್ತಿಯನ್ನು ನೀಡು. ನನಗೆ ಬೇರೆ ಏನೂ ಬೇಡ.
ಪಿಪ್ಪಲಾದ ಕಾಲಕ್ರಮದಲ್ಲಿ ಒಬ್ಬ ದೊಡ್ಡ ಋಷಿಯಾದ.